# ನಮ್ಮ ವಿದ್ಯಾರ್ಥಿನಿಲಯದ ಸಂಕ್ಷಿಪ್ತ ಪರಿಚಯ

## ಅಲ್ಪಸಂಖ್ಯಾತರ ಮೆಟ್ರಿಕ್ ನಂತರ ಬಾಲಕರ ವಿದ್ಯಾರ್ಥಿನಿಲಯ ಚಿಕ್ಕಬಳ್ಳಾಪುರ ಟೌನ್ ಚಿಕ್ಕಬಳ್ಳಾಪುರ ಜಿಲ್ಲೆ –562101

| | |
|---|---|
| ಪ್ರಾರಂಭವಾದ ವರ್ಷ ದಿನಾಂಕ | 2012–13ನೇ ಸಾಲು ದಿನಾಂಕ:15–01–2013 |
| ಸರ್ಕಾರಿ ಆದೇಶ ಸಂಖ್ಯೆ | ಎಫ್.ಡಿ2 ಟಿಎಫ್‌ಪಿ 2010 ದಿನಾಂಕ:30–04–2010 |
| ಕಟ್ಟಡದ ವಿಸ್ತೀರ್ಣ | 180/230 |
| ಅಕ್ಷಾಂಶ–ರೇಖಾಂಶ | Lat N 13.446884' Long E 77.715545' |
| ಮಂಜೂರಾತಿಯಾದ ವಿದ್ಯಾರ್ಥಿಗಳ ಸಂಖ್ಯೆ | 75 |
| ಪ್ರಸ್ತುತ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳ | 60 |
| ತರಗತಿ | ಪ್ರಥಮ ಪಿಯುಸಿ ಯಿಂದ ಉನ್ನತ ವ್ಯಾಸಂಗದವರೆಗೆ |
| ಮಾಧ್ಯಮ | – |




**:ವಿವರಣೆ:**

ಭಾರತರತ್ನ ತಾಂತ್ರಿಕ ಧೀರಾ ವಿಶ್ವೇಶ್ವರಯ್ಯನವರ ಹುಟ್ಟೂರಾದ ಮುದ್ದೇನಹಳ್ಳಿಯನ್ನು ಹೊಂದಿರುವ ಚಿಕ್ಕಬಳ್ಳಾಪುರ ಜಿಲ್ಲೆಯ ಚಿಕ್ಕಬಳ್ಳಾಪುರ ಟೌನ್‌ನಲ್ಲಿರುವ ಅಲ್ಪಸಂಖ್ಯಾತರ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿನಿಲಯವು ಅಲ್ಪಸಂಖ್ಯಾತರ, ಬಡ ಮತ್ತು ಹಿಂದುಳಿದ ವಿದ್ಯಾರ್ಥಿಗಳ ಕಾಮದೇನು ಕಲ್ಪವೃಕ್ಷವಾಗಿ ತಾಯಿ ಪ್ರೇಮದ ರೀತಿಯಲ್ಲಿ ವಿದ್ಯಾರ್ಥಿಗಳಿಗೆ ತನ್ನಲ್ಲಿರುವ ಸೌಲಭ್ಯವನ್ನು ಸಕಾಲಕ್ಕೆ ಒದಗಿಸಿ ಪ್ರತಿ ವರ್ಷ 75 ವಿದ್ಯಾರ್ಥಿಗಳ ಶೈಕ್ಷಣಿಕ, ಭೌದ್ಧಿಕ, ನೈತಿಕ, ಸಕಾರಾತ್ಮಕ, ಜ್ಞಾನಾತ್ಮಕ ಶಾರೀರಿಕ, ಆರೋಗ್ಯಾತ್ಮಕ, ಜ್ಞಾನಾತ್ಮಕ ರಕ್ಷಾಣಾತ್ಮಕ, ಸಮೃದ್ಧಿಯನ್ನು ಗುಣಾತ್ಮಕಗೊಳಿಸಲು ಸದಾ ನಿರಾಂತರ ಜ್ಯೋತಿಯಂತೆ ಚಿಕ್ಕಬಳ್ಳಾಪುರ ಪ್ರಶಾಂತ ನಗರದಲ್ಲಿ ಪ್ರಶಾಂತವಾಗಿ 2012–13 ನೇ ಸಾಲಿನಲ್ಲಿ ಬಡ ವಿದ್ಯಾರ್ಥಿಗಳಿಗೆ ಸೂರಾಗಿ, ಹಸಿದವರಿಗೆ–ಆಹಾರವಾಗಿ, ಜ್ಞಾನಕ್ಕೆ–ಭಂಡಾರವಾಗಿ, ಕತ್ತಲೆಗೆ–ಬೆಳಕಾಗಿ, ನೋವಿಗೆ–ನಲಿವಾಗಿ ತನ್ನ ಅಸ್ಥಿತ್ವನ್ನು ನಿಲಯ ಹೊಂದಿದೆ.

ನಿಲಯದಲ್ಲಿ ಶೈಕ್ಷಣಿಕ, ಭೌದ್ಧಿಕ, ಭೌತಿಕ, ಜ್ಞಾನದ ವೃದ್ಧಿಗಾಗಿ ನಮ್ಮ ಇಲಾಖೆ ನಿಲಯದ ಪ್ರಾರಂಭದಲ್ಲಿಯೇ ವ್ಯವಸ್ಥಿತವಾದ, ವಿದ್ಯಾರ್ಥಿಗಳ ವ್ಯಾಸಂಗಕ್ಕೆ ಮತ್ತು ಸ್ಪರ್ಧಾತ್ಮಕ ಜಗತ್ತಿಗೆ ಉದ್ರೇಪಿಸಿಕೊಳ್ಳುವ ರೀತಿಯಲ್ಲಿ ಗ್ರಂಥಾಭಂಡಾರವನ್ನು ಹೊಂದಿರುವ ನಿರಂತರ ಜ್ಞಾನ ಸ್ಪರ್ಧೆಯನ್ನು ನೀಡುವ ರೀತಿಯಲ್ಲಿ ಗ್ರಂಥಾಲಯ ಹೊಂದಿದೆ. ಈ ನಿಲಯದಲ್ಲಿ ಪ್ರಜಾಪ್ರಭುತ್ವೀಯ ಮೂಲಭೂತ ಸೌಕರ್ಯಗಳನ್ನು ನೀಡಲಾಗುತ್ತಿದೆ. ನಿಲಯದಲ್ಲಿ ಕೈತೋಟವಿದ್ದು, ವಿವಿಧ ಬಗೆಯ ಸೊಪ್ಪು, ತರಕಾರಿ, ಹಣ್ಣಿನ ಗಿಡಗಳಿಂದ ನಳನಳಿಸುತ್ತಿದೆ. ಕೆಲವೊಂದು ಸಂದರ್ಭದಲ್ಲಿ ಇಲ್ಲಿ ಬೆಳೆಯುವ ಸೊಪ್ಪು ತರಕಾರಿಗಳನ್ನು ಅಡುಗೆಗೆ ಬಳಸಲಾಗುತ್ತದೆ. ವಿದ್ಯಾರ್ಥಿಗಳಿಗೆ ನಿಗದಿಪಡಿಸಿದ ಮೆನುಚಾರ್ಟ್ ಪ್ರಕಾರ ಪೌಷ್ಠಿಕ ಆಹಾರವನ್ನು ನೀಡಲಾಗುತ್ತಿದ್ದು, ಆರ್.ಓ ಘಟಕದ ಮೂಲಕ ಶುದ್ಧ ಕುಡಿಯುವ ವ್ಯವಸ್ಥೆಯನ್ನು ಮಾಡಲಾಗಿದೆ. ಅದರ ಜೊತೆಗೆ ಮೂಲಭೂತ ಸೌಕರ್ಯಗಳಾದ ಕ್ರೀಡಾ ಸಾಮಾಗ್ರಿಗಳನ್ನು, ಸೋಪ್‌ಕಿಟ್, ಬೆಡ್, ಬೆಡ್‌ಶಿಟ್, ಫಿಲ್ಲೋ 2ಟಯರ್ ಕಾಟ್‌ಗಳ ವ್ಯವಸ್ಥೆ ನೀಡಲಾಗುತ್ತಿದೆ, ಪಠ್ಯ ವಿಷಯಗಳ ಜೊತೆಗೆ ಪಠ್ಯೇತರ ವಿಷಯದಲ್ಲಿ ವಿದ್ಯಾರ್ಥಿಗಳನ್ನು ತೊಡಗಿಸಿಕೊಳ್ಳುವಂತೆ ಮಾಡಲಾಗಿದ್ದು, ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಸ್ಪರ್ಧಾತ್ಮಕ ದೃಷ್ಟಿಯಿಂದ ಗ್ರಂಥಾಲಯದಲ್ಲಿ ಪ್ರಚಲಿತ ವಿದ್ಯಾಮಾನಗಳನ್ನು ತಿಳಿಯಲು ನಿಯತಕಾಲಿಕೆ ಪುಸ್ತಕಗಳನ್ನು, ದಿನಪತ್ರಿಕೆಗಳನ್ನು ನಿಯಮಿತವಾಗಿ ಒದಗಿಸಲಾಗುತ್ತಿದೆ. ವಿದ್ಯಾರ್ಥಿಗಳ ಸುರಕ್ಷತೆಗಾಗಿ ವಿದ್ಯಾರ್ಥಿನಿಲಯದ ಸ್ನಾನದ ಗೃಹದಲ್ಲಿ ಬಿಸಿ ನೀರಿಗಾಗಿ ಸೋಲಾರ್ ವಾಟರ್ ಹೀಟರ್‌ನ ವ್ಯವಸ್ಥೆಗೊಳಿಸಲಾಗಿದೆ.